

ಓದುವ ಅಭಿರುಚಿ ಬೆಳೆಸುವ

ಸಾಹಿತ್ಯ ಮಂಟಪ

೩

'ಧ್ವನಿ' ಶೈಕ್ಷಣಿಕ ಯೋಜನೆಗಳ ವ್ಯಾಪ್ತಿಯಲ್ಲಿ ಉಚಿತ ಹಂಚಿಕೆಗಾಗಿ

ಇಲ್ಲಿನ ಕಥೆ, ಕವನಗಳನ್ನು ನೀವೂ ಓದಿರಿ; ಬೇರೆಯವರಿಗೂ ಓದಿ ಹೇಳಿರಿ.

ನವೆಂಬರ್–ಡಿಸೆಂಬರ್ ೨೦೨೪–೨೫

ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
Dhwani Educational Resource Centre

ಆರಂಭ ಯೋಜನೆ
Arambha 2024-25 Project
is Supported by Many
Individual Donors

ಸದಾಶಯ

ಪ್ರೀತಿಯ ಮಕ್ಕಳೇ,

ಓದುವ ಅಭಿರುಚಿ ಹೆಚ್ಚಿಸಿಕೊಳ್ಳಲು ಪ್ರೇರಣೆ ನೀಡುವ 'ಸಾಹಿತ್ಯ ಮಂಟಪ' ನಿಮ್ಮ ಕೈಯಲ್ಲಿದೆ. ಇದರಲ್ಲಿ ಕನ್ನಡ ಕಥೆ – ಕವನಗಳ ಜೊತೆಗೆ, ಮೂಲ ಇಂಗ್ಲೀಷ ಕಥೆಯೊಂದಿಗೆ ಅದರ ಅನುವಾದ ಕೂಡ ಇವೆ.

ವ್ಯಕ್ತಿತ್ವವನ್ನು ಸುಂದರವಾಗಿ ಅರಳಿಸುವ ಶಕ್ತಿ ಹೊಂದಿರುವ ಸಾಹಿತ್ಯ ಮಂಟಪವು ನಿಮ್ಮಲ್ಲಿ ಹೊಸ ಆಲೋಚನೆಗಳಿಗೆ ದಾರಿದೀಪವಾಗಲಿ ಎಂಬುದು ನಮ್ಮ ಆಶಯ.

ಪ್ರತಿ ಕಥೆಯ ಕೊನೆಗೆ ಆಕರಗಳನ್ನು ಕೊಡಲಾಗಿದೆ. ಶಿಕ್ಷಕರ ಸಹಾಯದಿಂದ ನಿಮ್ಮ ಶಾಲೆಯ ಗ್ರಂಥಾಲಯಕ್ಕೆ ಆ ಪುಸ್ತಕಗಳನ್ನು ತರಿಸಿಕೊಂಡು ಇನ್ನೂ ಹೆಚ್ಚುಹೆಚ್ಚು ಓದಲು ಯತ್ನಿಸಿ.

ಸಾಹಿತ್ಯ ಮಂಟಪವನ್ನು ಸವಿದ ಬಳಿಕ ನಿಮ್ಮ ಅಭಿಪ್ರಾಯಗಳನ್ನು ಧ್ವನಿಯೊಂದಿಗೆ ಹಂಚಿಕೊಂಡರೆ ನಮಗೆಲ್ಲಾ ಸಂತಸವಾಗುತ್ತದೆ.

ಧನ್ಯವಾದಗಳೊಂದಿಗೆ...

– ಧ್ವನಿ ಬಳಗ

ಈ

ಸಾಹಿತ್ಯ ಮಂಟಪದಲ್ಲಿ

* ಕರಡಿ ರಸಾಯನ

– ಟಿ.ಎಸ್. ನಾಗರಾಜ ಶೆಟ್ಟಿ – ೪

* ಹಾಡುವ ಹಕ್ಕಿ

– ಕಂಚ್ಯಾಣಿ ಶರಣಪ್ಪ – ೧೪

* ಗೆಳೆಯರ ಸಾಹಸ

– ಹ.ಮ.ಪೂಜಾರ – ೨೧

* ಗೋಡೆಯ ಇನ್ನೊಂದು ಬದಿಯಲ್ಲಿ

– ಅನು: ಪ್ರೇಮಾ ಶಿವಾನಂದ – ೨೯

* The other side of the wall

– ಅಂತರಜಾಲ – ೩೧

ಕರಡಿ ರಸಾಯನ

– ಟಿ.ಎಸ್.ನಾಗರಾಜ ಶೆಟ್ಟಿ

ಖುಷಿ ಓದಿಗಾಗಿ

ಕರಡಿ ಕೇಶಯ್ಯನವರಿಗೆ ನಾಲ್ಕು ಜನ ಮಕ್ಕಳು. ಮರಿ ಕಿಟ್ಟ, ಮರಿ ಪುಟ್ಟ, ಮರಿ ತಿಮ್ಮ ಮತ್ತು ಮರಿ ಬೊಮ್ಮ. ಹೆಸರುಗಳು ಹೇಗಿವೆ? ಚೆನ್ನಾಗಿದಾವಲ್ಲ? ಅವರ ಅಮ್ಮ ಕರಡಿ ಕೇಶಮ್ಮನವರೇ ಹೆಸರಿಟ್ಟದ್ದು.

ಕೇಶಯ್ಯ, ಕೇಶಮ್ಮ ಇಬ್ಬರಿಗೂ ಹಲಸಿನ ಹಣ್ಣು, ಜೇನು ತುಪ್ಪ ಅಂದರೆ ಬಹಳ ಇಷ್ಟ. ಎರಡೂ ಸಿಕ್ಕರಂತೂ ಬೆರೆಸಿ ರಸಾಯನ ಮಾಡಿ ತಿನ್ನುತ್ತವೆ. ಮಕ್ಕಳು

ಕೂಡ ಎಲ್ಲವನ್ನೂ ತಿಂದು ಕೈಯನ್ನಷ್ಟೇ ಅಲ್ಲದೆ ಪಾತ್ರೆಯನ್ನೂ ನೆಕ್ಕುತ್ತಿದ್ದವು! ಈ ಕಾರಣಕ್ಕಾಗಿಯೋ ಏನೋ 'ಕರಡಿ ರಸಾಯನ' ಎನ್ನುವ ಮಾತು ತುಂಬಾ ಜನಪ್ರಿಯವಾಗಿಬಿಟ್ಟಿದೆ.

ಒಂದು ದಿನ ಬೆಳಿಗ್ಗೆ ಕರಡಿ ಕೇಶಯ್ಯನವರು ಹೊಳೆಯಲ್ಲಿ ಮುಳುಗಿ, ಚೆನ್ನಾಗಿ ಮೈ ತೊಳೆದುಕೊಂಡು ಗುಹೆಯ ಕಡೆಗೆ ಮರಳುತ್ತಿದ್ದರು. ದಾರಿಯಲ್ಲಿ ಬರುವಾಗ ಒಂದು ತೋಟದ ಬದಿಯಲ್ಲಿ ಮೂಗಿಗೆ ಗಮ ಗಮ ವಾಸನೆ ಬಡಿಯಿತು. ಎಲ್ಲೋ ಹಲಸು ಹಣ್ಣಾಗಿದೆ. ವಾಸನೆ ಬಡಿದದ್ದೇ ತಡ, ಅವರ ನಾಲಗೆಯಲ್ಲಿ ನೀರೂರಿತು.

ಎರಡೂ ಕಾಲುಗಳ ಮೇಲೆ ನಿಂತು ಮೆಲ್ಲಗೆ ಅತ್ತಿತ್ತ ಕಣ್ಣಾಡಿಸಿದರು. ಯಾರ ಸುಳಿವೂ ಇರಲಿಲ್ಲ. ಕಾವಲುಗಾರ ಇನ್ನೂ ಬಂದಿರಲಿಲ್ಲ. ಮನುಷ್ಯರೆಂದರೆ

ಅದಕ್ಕೆ ಬಹಳ ಭಯ. ಅದರೆ ತಾತ ಹೀಗೆಯೇ ಒಮ್ಮೆ ಮನುಷ್ಯರ ಕೈಗೆ ಸಿಕ್ಕಿ, ಅವರ ಬಡಿತಕ್ಕೆ ಬಲಿಯಾದ ವಿಷಯವನ್ನು ಅಜ್ಜಿ ಆಗಾಗ ಹೇಳುತ್ತಿದ್ದರು.

ಆದ್ದರಿಂದ ಅವರು ಬಹಳ ಎಚ್ಚರವಹಿಸುತ್ತಿದ್ದರು. ತನಗೂ ಹಾಗೇ ಆದರೆ ಹೆಂಡತಿ ಮಕ್ಕಳ ಗತಿ? ಎಂದು ಅಳುಕುತ್ತ ಮೆಲ್ಲಗೆ ಬೇಲಿಯಲ್ಲಿ ನುಗ್ಗಿ ಒಳ ಹೊಕ್ಕರು. ವಾಸನೆಯೇ ದಾರಿ ಸೂಚಿಸಿತು. ಕೆಲವು ಹೆಜ್ಜೆ ಹಾದ ನಂತರ ಹಲಸಿನ ಮರ ಸಿಕ್ಕಿತು.

ತಲೆ ಎತ್ತಿ ನೋಡುತ್ತಾರೆ, ಒಂದು ದೊಡ್ಡ ಹಣ್ಣು ಚೆನ್ನಾಗಿ ಮಾಗಿದೆ. ಮೇಲೆ ಹತ್ತಿ ಅದನ್ನು ಮುರಿದು ಇಳಿಸಿಕೊಂಡರು. ದುಡುದುಡು ಓಡುತ್ತ ಗುಹೆ ಸೇರಿದರು.

ಗಮಲು ಹೊಡೆಯುತ್ತಿದ್ದ ಆ

ಹಣ್ಣನ್ನು ಕಂಡು ಎಲ್ಲರಿಗೂ ಖುಷಿ ಹಣ್ಣನ್ನು ಬಿಚ್ಚಿ ಕೊಡಲು ಮರಿಗಳು ಗದ್ದಲ ಮಾಡಿದವು. ಕೇಶಮ್ಮನವರು ಹೇಳಿದರು:

"ಮಕ್ಕಳೇ ನೀವು ಕಾಡಿಗೆ ಹೋಗಿ ಜೇನುತುಪ್ಪ ತನ್ನಿ. ನಾವು ಹಲಸಿನ ತೊಳೆ ಬಿಡಿಸಿಡುತ್ತೇವೆ. ಎರಡನ್ನೂ ಬೆರೆಸಿ ತಿಂದರೆ ಬಹಳ ರುಚಿಯಾಗಿರುತ್ತದೆ. ಯಾರು ಮೊದಲು ಜೇನುತುಪ್ಪ ತರುತ್ತೀರೋ ಅವರಿಗೆ ಹೆಚ್ಚು ರಸಾಯನ." ಎಂದು ಆಸೆಯನ್ನೂ ಹಚ್ಚಿದರು.

ಕಿಟ್ಟು, ಪುಟ್ಟು ಒಂದು ಕಡೆ ಹೊರಟರು. ತಿಮ್ಮ, ಬೊಮ್ಮ ಮತ್ತೊಂದು ದಿಕ್ಕು ಹಿಡಿದರು.

ತಿಮ್ಮ, ಬೊಮ್ಮ ಯಾವ ಕೆಲಸ ಹೇಳಿದರೂ ಜಗಳ ಮಾಡುತ್ತಿದ್ದರು. ನೀನು ಮೊದಲು ಮಾಡು, ನೀನು ಮೊದಲು ಮಾಡು ಎನ್ನುವುದು

ಅವರಿಬ್ಬರ ದಿನ ನಿತ್ಯದ ಹಾಡಾಗಿತ್ತು.

ಈಗಲೂ ಹಾಗೇ ಆಯಿತು. ಒಂದು ಮರದ ಕೊಂಬೆಯ ತುದಿಗೆ ಹೆಜ್ಜೇನು ಕಟ್ಟಿತ್ತು. ಮೊದಲು ಮರ ಹತ್ತಬೇಕು. ಗೂಡನ್ನು ಕೈಯಿಂದ ಬಡಿಯಬೇಕು. ಜೇನು ಹುಳ ಓಡಿಹೋಗುತ್ತವೆ. ಕಚ್ಚಲು ಪ್ರಯತ್ನಿಸುತ್ತವೆ. ಆದರೆ ಕೂದಲು ತುಂಬಿದ ಮೈಯನ್ನು ಕಡಿಯಲು ಆಗುವುದಿಲ್ಲ! ನಂತರ ಮೇಣ ಹಿಂಡುವುದು ಸುಲಭ.

"ನೀನು ಮರ ಹತ್ತು. ನಾನು ಸಹಾಯ ಮಾಡುತ್ತೇನೆ." ಎಂದ ತಿಮ್ಮ. ನೀನೇ ಮರ ಹತ್ತು. ನಾನೇ ಸಹಾಯ ಮಾಡುತ್ತೇನೆ." ಎಂದ ಬೊಮ್ಮ.

ಒಬ್ಬರೂ ಮರ ಹತ್ತಲು ಹೋಗಲಿಲ್ಲ, ಕೆಲಸ ಆಗಲಿಲ್ಲ. ಜಗಳ ಮಾತ್ರ ಮುಂದುವರಿದೇ ಇತ್ತು.

ಆ ಕಡೆ ಕಿಟ್ಟ, ಪುಟ್ಟ ಹೋಗಿದ್ದರಲ್ಲ? ಅವರಿಬ್ಬರದೂ ಬಹಳ ಹೊಂದಿಕೊಂಡು ಹೋಗುವ ಸ್ವಭಾವ. ತಿಮ್ಮ, ಬೊಮ್ಮರಂತೆ ಸೋಮಾರಿಗಳಲ್ಲ. ಬಹಳ ಚಟುವಟಿಕೆಯಿಂದ, ಲವಲವಿಕೆಯಿಂದ ಕೆಲಸ ಮಾಡುತ್ತಿದ್ದರು. ಒಬ್ಬರಿಗೊಬ್ಬರು ಸಹಾಯ ಮಾಡಲು ಸದಾ ಸಿದ್ಧ. ಮಾದರಿ ಅಣ್ಣ ತಮ್ಮಂದಿರೆಂದರೆ ಅವರಿಬ್ಬರೇ ಸರಿ.

ಅವರಿಗೂ ಒಂದೆಡೆ ಹೆಜ್ಜೇನು ಕಾಣಿಸಿತು. ಕೂಡಲೇ ಕಿಟ್ಟ ಪುಟ್ಟನಿಗೆ ಹೇಳಿದ;

“ಪುಟ್ಟ, ನೀನು ಮರ ಹತ್ತು, ಹುಳ ಓಡಿಸು. ನಾನು ಸಹಾಯ ಮಾಡುತ್ತೇನೆ.”

ಪುಟ್ಟ ತಲೆಯಾಡುಸುತ್ತಲೇ ಹತ್ತಿದ. ಗೂಡಿಗೆ ಪಂಜದಿಂದ ಹೊಡೆದ. ಜೇನು ಜುಯ್ಯೆನ್ನುತ್ತ ಪರಾರಿ ಆದವು. ಸ್ವಲ್ಪ

ಹೊತ್ತಿನಲ್ಲೇ ಗೂಡು ಖಾಲಿ ಆಯಿತು. ಎಲೆಗಳಿಂದಲೇ ಎರಡು ದೊಡ್ಡ ದೊನ್ನೆಗಳನ್ನು ತಯಾರಿಸಿಕೊಂಡರು. ಅವಕ್ಕೆ ಜೇನನ್ನು ಹಿಂಡಿದರು. ಇಬ್ಬರೂ ಒಂದೊಂದನ್ನು ಹೊತ್ತು ಗುಹೆಗೆ ಬಂದರು.

ಕೇಶಯ್ಯ, ಕೇಶಮ್ಮನವರು ತೊಳೆಗಳನ್ನು ಬಿಡಿಸಿಕೊಂಡು ಕಾಯುತ್ತಿದ್ದರು. ಹುಡುಗರು ಬಂದದ್ದೇ ತಡ ಕೆಲಸಕ್ಕೆ ತೊಡಗಿದರು. ಬಂಡೆಯೊಂದರ ಕುಳಿಯಲ್ಲಿ ಜೇನನ್ನು ಸುರಿದು, ತೊಳೆಗಳನ್ನು ಸೀಳಿ ಹಾಕಿದರು. ಚೆನ್ನಾಗಿ ಬೆರೆಸಿದರು.

"ಇನ್ನೂ ತಿಮ್ಮ, ಬೊಮ್ಮ ಬರಲೇ ಇಲ್ಲವಲ್ಲ." ಎಂದರು ಕೇಶಮ್ಮನವರು. ಅದಕ್ಕೆ ಕೇಶಯ್ಯನವರು, "ತಿನ್ನುತ್ತಿರೋಣ, ಬಂದ ಮೇಲೆ ಅವರೂ ಜೊತೆಗೆ ಸೇರಿಕೊಳ್ಳುತ್ತಾರೆ." ಎಂದರು. ತಿನ್ನದೇ

ಕಾಂಯುತ ಕೂರಲು ಂಯಾರೂ ಸಿದ್ಧರಿರಲಿಲ್ಲ. ಬಾಯಲ್ಲಿ ಆಗಲೇ ಜೊಲ್ಲು ಸುರಿಯುತ್ತಿತ್ತು. ಪುಟ್ಟ ಕಿಟ್ಟರೂ ಸೇರಿ ಗಪಗಪನೆ ತಿನ್ನತೊಡಗಿದರು.

ತಿಮ್ಮ, ಬೊಮ್ಮರ ಜಗಳ ಬಹಳ ತಡವಾಗಿ ಬಗೆಹರಿಯಿತು. ಇಬ್ಬರೂ ಸೇರಿಯೇ ಒಟ್ಟಾಗಿ ಮರ ಹತ್ತಲು ಒಪ್ಪಂದವಾಯಿತು.

ಹಾಗೆಯೇ ಇಬ್ಬರೂ ಸೇರಿಯೇ ಜೇನು ಹಿರಿಯಬೇಕು ಎಂದೂ ಮಾತು ಆಯಿತು. ಇದೇ ರೀತಿ ಕೆಲಸ ಮುಗಿಸಿ ಬರುವ ವೇಳೆಗೆ ಬಹಳ ತಡವಾಗಿತ್ತು. ರಸಾಯನ ಸ್ವಲ್ಪ ಮಾತ್ರ ಉಳಿದಿತ್ತು. ಅವರು ಅಷ್ಟನ್ನೇ ತಿಂದು ತೃಪ್ತಿ ಪಡಬೇಕಾಯಿತು.

ತಿಂದ ಮೇಲೆ ತಂದೆ ತಾಯಿಯರ ಹತ್ತಿರ ಒಬ್ಬರ ಮೇಲೆ ಒಬ್ಬರು ದೂರು ಹೇಳಲು ತೊಡಗಿದರು. ತನಗೆ

ಕಡಿಮೆ ರಸಾಯನ ದೊರೆಯಲು ಮತ್ತೊಬ್ಬನೇ ಕಾರಣ ಎನ್ನುವುದು ಇಬ್ಬರ ವಾದವೂ ಆಗಿತ್ತು.

ಆಗ ಕೇಶಮ್ಮನವರು,"ಜಗಳ, ವಾದಗಳಿಂದ ಕಾಲ ಕಳೆಯುವುದೇ ಹೊರತು ಕೆಲಸ ಸಾಗುವುದಿಲ್ಲ. ಕೆಲಸವನ್ನು ಸಕಾಲದಲ್ಲಿ ಮುಗಿಸುವವರಿಗೆ ಪ್ರಯೋಜನವೂ ದೊರೆಯುತ್ತದೆ, ಅವರ ಭವಿಷ್ಯವೂ ಚೆನ್ನಾಗಿರುತ್ತದೆ.

ಪುಟ್ಟ, ಕಿಟ್ಟರಿಗೆ ಹೆಚ್ಚು ರಸಾಯನ ಸಿಕ್ಕಿತು. ಸಮಾಧಾನವೂ ದೊರೆಯಿತು. ಅದೇ ನಿಮ್ಮಿಬ್ಬರನ್ನೂ ನೋಡಿ. ರಸಾಯನವೂ ಹೆಚ್ಚು ಸಿಗಲಿಲ್ಲ, ನೆಮ್ಮದಿಯೂ ದೊರಕಲಿಲ್ಲ. ತಿಳಿಯಿತೇ?" ಎಂದರು. ಅಮ್ಮನ ಮಾತಿಗೆ ತಿಮ್ಮ ಬೊಮ್ಮರು ತಲೆ ತಗ್ಗಿಸಿದರು.

"ಅಮ್ಮಾ, ನೀನು ಹೇಳಿದ್ದು ನಿಜ. ಇನ್ನು ಮುಂದೆ ನಾವು ಜಗಳ ಆಡುವುದಿಲ್ಲ.

ಕೆಲಸ ಮಾಡುತ್ತೇವೆ." ಅಂದರು. ನಂತರ ಕೈ ಕೈ ಹಿಡಿದು ಇಬ್ಬರೂ ಒಂದಾದರು. ನಲಿಯುತ್ತಾ ವಿಹಾರಕ್ಕೆ ಹೊರಟರು.

ರಚನೆ: ಟಿ.ಎಸ್. ನಾಗರಾಜ ಶೆಟ್ಟಿ
ಆಕರ:ಕರಡಿ ರಸಾಯನ
ಪ್ರಕಾಶನ: ನಿರ್ಮಲ ಪ್ರಕಾಶನ, ತಿಪಟೂರು
ಮೊ: 9448979537

"ಮನ ಮಂಥನ"

* ನೀನೂ ಜೇನುಗೂಡನ್ನು ಹತ್ತಿರದಿಂದ ನೋಡಿದ್ದರೆ, ಮತ್ತು ಜೇನಿನ ರುಚಿಯನ್ನು ಸವಿದಿದ್ದರೆ ಆ ನಿನ್ನ ಅನುಭವ ಕುರಿತು ಗೆಳೆಯ–ಗೆಳತಿಯರೊದಿಗೆ ಮಾತನಾಡು.

ಹಾಡುವ ಹಕ್ಕಿ

– ಕಂಚ್ಯಾಣಿ ಶರಣಪ್ಪ



ನಾಗರಬೆಟ್ಟದ ಪಕ್ಕದಲ್ಲಿ ಸುಂದರವಾದ ಕಾಡು ಹಬ್ಬಿಕೊಂಡಿತ್ತು. ಕಾಡಿನ ನಟ್ಟ ನಡುವೆ ಪುಟ್ಟದಾದ ಸಿಹಿನೀರಿನ ಕೊಳವಿತ್ತು. ಅದಕ್ಕೆ ಹಾಲು ಹೊಂಡವೆಂದು ಕರೆಯುತ್ತಿದ್ದರು. ಎಳೆನೀರಿನಂತಹ ತಿಳಿನೀರಿನಿಂದ ಆ ಸರೋವರ ತುಂಬಿ ತುಳುಕುತ್ತಿತ್ತು. ಅದರ ಸುತ್ತಲೂ ಎತ್ತರವಾದ ಗಿಡಮರಗಳು ದಟ್ಟವಾಗಿ ಬೆಳೆದು ನಿಂತಿದ್ದವು. ಹಚ್ಚ

ಹಸುರಿನ ಹಲವಾರು ಬಳ್ಳಿಗಳು ಹಬ್ಬಿಕೊಂಡಿದ್ದವು. ಗಿಡಬಳ್ಳಿಗಳಲ್ಲಿ ಬಣ್ಣಬಣ್ಣದ ಹೂಗಳು ಅರಳಿ ಕಣ್ಣು ಸೆಳೆಯುತ್ತಿದ್ದವು. ಟೊಂಗೆ ಟೊಂಗೆಗಳಲ್ಲಿ ಬಗೆ ಬಗೆ ಹಣ್ಣು ಕಾಯಿಗಳು ಸುರಿದಿದ್ದವು. ಅದಕ್ಕಾಗಿ ಅಲ್ಲಿ ಹಲವಾರು ಹಕ್ಕಿ ಪಕ್ಷಿಗಳು ಕಾಡುಪ್ರಾಣಿಗಳು ನೆಲೆಸಿದ್ದವು. ಸುಖವಾಗಿ ಜೀವನ ಸಾಗಿಸುತ್ತಿದ್ದವು.

ಕಬ್ಬಕ್ಕಿಯ ಹಿಂಡಿನಲ್ಲಿ ಒಂದು ಪುಟ್ಟ ಹಕ್ಕಿ ಇತ್ತು. ಅದು ಬಲು ಸುಂದರವಾಗಿತ್ತು. ಅದರ ಕಂಠ ಮಧುರವಾಗಿತ್ತು. ಅದು ಇಂಪಾಗಿ ಹಾಡುತ್ತಿತ್ತು. ಬೆಳಗು ಬೈಗಿನ ಚಂದದ ಸಮಯದಲ್ಲಿ ಹಾಡಿ ಹಾಡಿ ಸಂತಸ ಪಡುತ್ತಿತ್ತು. ಕಾಡಿನ ಪಶು ಪಕ್ಷಿಗಳಿಗೆ ಆನಂದ ನೀಡುತ್ತಿತ್ತು. ಕಾಡಿನ ಪಕ್ಷಿಗಳು ಅದನ್ನು ಅಕ್ಕರೆಯಿಂದ ಕಾಣಿತ್ತಿದ್ದವು. “ಹಾಡಿನ ಹಕ್ಕಿ” ಎಂದೇ ಪ್ರೀತಿಯಿಂದ

ಕರೆಯುತ್ತಿದ್ದವು.

ಒಂದು ದಿನ ಬೆಳಗಾಗುತ್ತಲೇ ಹಾಡಿನ ಹಕ್ಕಿ ಗೂಡು ಬಿಟ್ಟು ಪಟಪಟನೆ ಪಕ್ಕ ಬಡಿದು ಗಕ್ಕನೇ ಗಗನಕ್ಕೆ ಹಾರಿತು. ಬನಬನವನ್ನು ಸುತ್ತಾಡಿತು. ತಿನ್ನಲು ಹಣ್ಣು ಕಾಯಿಗಳನ್ನು ಹುಡುಕುತ್ತ ಮರದಿಂದ ಮರಕ್ಕೆ ಹಾರಾಡತೊಡಗಿತು. ಅಷ್ಟರಲ್ಲಿ ಅದಕ್ಕೆ ಬಾಯಾರಿಕೆಯಾಗಿ ಕೊಳದ ಕಡೆಗೆ ಹಾರಿತು. ಕೊಳದ ದಡದ ಬಯಲಿಲ್ಲಿ ಹಾಲುಗಾಳು ಹರವಿದ್ದನ್ನು ನೋಡಿತು.

ಹಾಲುಗಾಳನ್ನು ನೋಡುತ್ತಲೇ ಅದರ ಬಾಯಲ್ಲಿ ನೀರೂರಿತು. ರುಚಿರುಚಿಯಾದ ಕಾಳನ್ನು ಮುಕ್ಕಲು ಫಕ್ಕನೆ ಇಳಿದು ಬಿಟ್ಟಿತು. ಪಕಪಕನೇ ಕಾಳುಗಳನ್ನು ತಿನ್ನತೊಡಗಿತು. ಸವಿ ಸವಿಯಾದ ಕಾಳುಗಳನ್ನು ತಿಂದೂ ತಿಂದೂ ಸಾಕಾದ ಮೇಲೆ ಹಿಗ್ಗಿನಿಂದ

ಪಟಪಟನೆ ಪಕ್ಕ ಬಡಿಯಿತು. ಮೇಲಕ್ಕೆ ಹಾರಲು ಯತ್ನಿಸಿತು. ಆದರೆ ಅದಕ್ಕೆ ನೆಲಬಿಟ್ಟು ಹಾರಲಿಕ್ಕಾಗಲಿಲ್ಲ. ಅದರ ಕಾಲುಗಳು ಬಲೆಯಲ್ಲಿ ಸಿಕ್ಕಿಕೊಂಡದ್ದವು. ಬಲೆಯಿಂದ ಕಾಲುಗಳನ್ನು ಬಿಡಿಸಿಕೊಳ್ಳಲು ಪುಟ್ಟ ಹಕ್ಕಿ ಬಿಟ್ಟೂ ಬಿಡದೆ ಕೊಸರಾಡಿತು. ಕಾಲುಗಳು ಕಡೆಗಾಲಲ್ಲ. ಹಕ್ಕಿಗೆ ತುಂಬ ಭಯವಾಯಿತು. ಏಲಿಏಲಿ ಒದ್ದಾಡುತ್ತ ಬಲೆಯಲ್ಲಿ ಬಿದ್ದುಕೊಂಡಿತು. ಹೊತ್ತು ಮುಳುಗಿ ಕತ್ತಲು ಆವರಿಸಿತು. ಹಕ್ಕಿ ಜೀವ ಭಯದಿಂದ ಮಮ್ಮಲ ಮರುಗಿತು. ಇಡೀ ರಾತ್ರಿ ಸಾವಿನ ಚಿಂತೆಯಲ್ಲಿ ಮುಳುಗಿ ಹೋಯಿತು.

ಬೆಳಂ ಬೆಳಗಾಗುತ್ತಲೇ ಹಕ್ಕಿ ಕಣ್ಣು ಬಿಟ್ಟು ನೋಡಿತು. ಸೂರ್ಯನ ಕಿರಣಗಳು ಎಲ್ಲ ಕಡೆಗೂ ಹರಡಿಕೊಂಡಿದ್ದವು. ತರು–ಲತೆಗಳಲ್ಲಿ ಬಣ್ಣ ಬಣ್ಣದ ಹೂಗಳು ಅರಳಿ ಕಣ್ಣು

ಸೆಳೆದವು. ಹಾಲು ಹೊಂಡವಂತೂ ಚಿನ್ನದ ಹರಿವಾಣದಂತೆ ಹೊಳೆಯುತ್ತಿತ್ತು. ಬೆಳಗಿನ ಸಮಯದ ಸೊಗಸು ಹಕ್ಕಿಯ ಮನವನ್ನು ಸೆಳೆಯಿತು. ಅದು ತನ್ನ ಸಾವಿನ ಸಂಕಟವನ್ನು ಮರೆತು ಬಲೆಯಲ್ಲಿ ಎದ್ದು ಕುಳಿತು, ಹಿಗ್ಗಿನಿಂದ ಹಾಡತೊಡಗಿತು. ಹಾಡಿನ ಜಾಡನ್ನು ಹಿಡಿದು ಹಲವಾರು ಹಕ್ಕಿಗಳು ಹಾರಿಬಂದವು.

ಕಾಡಿನ ಪ್ರೀತಿಯ ಹಾಡುವ ಹಕ್ಕಿ ಬಲೆಯಲ್ಲಿ ಬಿದ್ದುದನ್ನು ಕಂಡು ತಳಮಳಗೊಂಡವು. ಪಾಪ!! ಹಕ್ಕಿ ಬೇಟೆಗಾರನ ಕೈಯಲ್ಲಿ ಸಿಕ್ಕು ಸಾಯುವುದಲ್ಲಾ! ಎಂದು ಮರುಗಿದವು. ಸಾವಿನ ಸಮಯದಲ್ಲಿ ನಿಶ್ಚಿಂತೆಯಿಂದ ಹಾಡುವುದನ್ನು ನೋಡಿ ಅವುಗಳಿಗೆ ಆಶ್ಚರ್ಯವಾಯಿತು. ಮರದಲ್ಲಿ ಕುಳಿತ ಕಬ್ಬಕ್ಕಿಯೊಂದು–

ಹಕ್ಕಿ! ಹಕ್ಕಿ! ಮುದ್ದಿನಹಕ್ಕಿ!

ಹಾಡುವ ಹಕ್ಕಿ! ಬಲೆಯಲಿ ಸಿಕ್ಕಿ!!
ಪಾಪದ ಹಕ್ಕಿ! ಹಾಡುತ ಕುಂತಿ!!
ನಿನಗಿಲ್ಲೇನು ಸಾವಿನ ಚಿಂತಿ?

ಅಯ್ಯೋ! ಎಂದು ಬಲೆಯಲ್ಲಿ ಬಿದ್ದ ಹಾಡುವ ಹಕ್ಕಿಯನ್ನು ಕೇಳಿತು. ಹಾಡುವ ಹಕ್ಕಿ ಅಂಜದೆ ಅಳುಕದೆ ಗಟ್ಟಿಯಾಗಿ ಹೇಳಿತು–

ಲೋಕದ ಚಲುವು ಚಲ್ಲಿಹುದಿಲ್ಲಿ!!
ಇಂತಹ ಸೊಗಸು ಸಿಕ್ಕುವುದೆಲ್ಲಿ?
ಹಿಗ್ಗುವ ಕಾಲಕೆ ಕುಗ್ಗುವುದೇಕೆ?
ಮರಣವು ಬರಲಿ ಅಂಜುವುದೇಕೆ?

ಎಂದು ಸರಾಗವಾಗಿ ಹಾಡುತ್ತಲೇ ಸಾರಿ ಸಾರಿ ಹೇಳಿತು.

ಬಲೆಯಲ್ಲಿ ಬಿದ್ದ ಪಾಪದ ಹಕ್ಕಿಯನ್ನು ಒಯ್ಯಲು ಬಂದ ಬೇಡನು ಬೆಕ್ಕಸ ಬೆರಗಾಗಿ ನಿಂತನು. ಮರದ ಮರೆಯಲ್ಲಿ ನಿಂತುಕೊಂಡು ಹಕ್ಕಿಗಳ ಮಾತನ್ನು ಕೇಳಿದನು. ಹಾಡುವ ಹಕ್ಕಿಯ

ಮಾತನ್ನು ಕೇಳಿ ಅವನ ಮನದಲ್ಲಿ ಹರ್ಷ ಉಕ್ಕಿ ಉಕ್ಕಿ ಹರಿಯಿತು! ದೇವರು ಕೊಟ್ಟ ಸೊಗಸನ್ನು ಸವಿದು ಆನಂದಿಸುವ ಹಕ್ಕಿಯನ್ನು ಕೊಲ್ಲಲು ಅವನ ಮನಸ್ಸು ಒಪ್ಪಲಿಲ್ಲ! ಅವನಿಗೆ ಅರಿವಿಲ್ಲದಂತೆ ಅವನ ಕೈಗಳು ಬಲೆಯನ್ನು ಬಿಚ್ಚಿದವು. ಹಾಡುವ ಹಕ್ಕಿಯ ಮೈಯನ್ನು ಪ್ರೀತಿಯಿಂದ ಸವರಿ ಅದನ್ನು ಹಾರಿಬಿಟ್ಟನು. ಹರುಷದಿಂದ ಹಾರಿ ಹೋಗುವ ಹಾಡುವ ಹಕ್ಕಿಯನ್ನು ಕಣ್ತುಂಬ ನೋಡಿ ಸಂತೋಷ ಪಟ್ಟನು.

ರಚನೆ: ಕಂಚ್ಯಾಣಿ ಶರಣಪ್ಪ
ಆಕರ: ಅಂದದ ಕಥೆಗಳು
ಪ್ರಕಾಶನ: ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
ಮೊ: 99011 11734

''ಮನ ಮಂಥನ''

* ನಿನ್ನ ಮನೆ, ಶಾಲೆ ಹತ್ತಿರದಲ್ಲಿ ಅಪಾಯದಲ್ಲಿ ಸಿಲುಕಿದ್ದ ಪಕ್ಷಿ–ಪ್ರಾಣಿಗೆ ಸಹಾಯ ಮಾಡಿದ್ದರೆ ಆ ಕುರಿತು ಒಂದು ಚಿಕ್ಕ ಲೇಖನ ಬರೆಯಲು ಪ್ರಯತ್ನಿಸು.

ಗೆಳೆಯರ ಸಾಹಸ

– ಹ.ಮ.ಪೂಜಾರ

ಕೇಶವ ಮತ್ತು ಕಾಶೀಮ ಇಬ್ಬರೂ ಬಾಲ್ಯ ಸ್ನೇಹಿತರು. ಒಂದೇ ತರಗತಿಯಲ್ಲಿ ಓದುತ್ತಿರುವ ಯುವಕರು. ಸಾಹಸಪ್ರಿಯರು, ಸೃಜನಶೀಲ ವ್ಯಕ್ತಿತ್ವ ಉಳ್ಳವರು. ನಾವೂ ಏನನ್ನಾದರೂ ಸಾಧಿಸಬೇಕೆಂಬ ಹಂಬಲ ಉಳ್ಳವರು. ಕಾಲೇಜಿಗೆ ಬಿಡುವಿನ ದಿನಗಳಿದ್ದಾಗ ಹೊರ ಸಂಚಾರಕ್ಕೆ ಹೋಗುತ್ತಿದ್ದರು. ಪರಿಸರದಲ್ಲಿ ನಡೆಯುವ ವಿಸ್ಮಯಗಳನ್ನು

ತಿಳಿಯುತ್ತಿದ್ದರು. ಚಾರಣಿಗರ ಸಾಹಸದ ಸುದ್ಧಿ ಓದುತ್ತಿದ್ದರು. ತಾವೂ ಅಂಥ ಸಾಹಸ ಮಾಡಬೇಕೆಂದು ಯೋಚಿಸುತ್ತಿದ್ದರು.

ಒಂದು ದಿನ ಬೆಳಗಿನ ಜಾವ ಮೂಡದಲ್ಲಿ ರವಿಯು ಉದಯಿಸುವ ಸಮಯ. ಆಲ್ಹಾದಕರ ವಾತಾವರಣ. ಮರ್ಗಳಲ್ಲಿ ಹಕ್ಕಿಗಳ ಚಿಲಿಪಿಲಿ. ಈ ವಾತಾವರಣವು ಕೇಶವ ಮತ್ತು ಕಾಶೀಮರಿಗೆ ಪ್ರೇರಣೆ ನೀಡಿರಬೇಕು.

ಇಬ್ಬರೂ ಬಹಳ ಹುರುಪಿನಿಂದ, ಲವಲವಿಕೆಯಿಂದ ಮನೆಯಿಂದ ಹೊರಟರು. ''ಇಂದು ನಾವಿಬ್ಬರೂ ಕಾಡಿನಲ್ಲಿ ವಿಹರಿಸಿ ಬರೋಣ. ಕಾಡಿನ ಬಗ್ಗೆ ಹೊಸದನ್ನು ತಿಳಿಯೋಣ." ಎಂದುಕೊಂಡರು. ಸಮೀಪದ ಕಾಡಿಗೆ ಕಾಡಿನಲ್ಲಿ ವಿಹರಿಸತೊಡಗಿದರು.

ಕಾಡಿನಲ್ಲಿ ಒಂದು ಚಿಕ್ಕ ಬೆಟ್ಟ. ಬೆಟ್ಟದ ಅಡಿಯಲ್ಲಿ ಗವಿಯ ದ್ವಾರ

ಕಂಡಂತಾಯಿತು. ಇಬ್ಬರೂ ಸನಿಹಕ್ಕೆ ಹೋದರು. ಇಣುಕಿ ನೋಡಿದರು. "ಓಹೋ..ಇದೊಂದು ಭಯಾನಕ ಸುರಂಗ ಮಾರ್ಗ ಇರಬಹುದು." ಎಂದು ಕೇಶವ ಗಾಬರಿಯಿಂದ ನುಡಿದ. "ಗಾಬರಿ ಆಗುವೆ ಏಕೆ? ನಾವು ಒಳಗೆ ಹೋಗಿ ಬರೋಣ." ಎಂದು ಧೈರ್ಯದಿಂದ ಹೇಳಿದ ಕಾಶೀಮ.

ಇಬ್ಬರೂ ತಮ್ಮ ಕೈಗಳನ್ನು ಹಿಡಿದುಕೊಂಡು ಒಬ್ಬರಿಗೊಬ್ಬರು ಧೈರ್ಯ ತಂದುಕೊಂಡರು. ಒಳಗಡೆ ಪ್ರವೇಶ ಮಾಡಿದರು. ನಿಜಕ್ಕೂ ಅದೊಂದು ಸುರಂಗ ಮಾರ್ಗವೇ ಆಗಿತು. ಸುರಂಗ ಮಾರ್ಗದಗುಂಟ ಹೊರಟರು. ಒಳಗೆ ಹೋದಂತೆ ಕತ್ತಲೇ ಕತ್ತಲು. ಮುಂದೆ ಹೋದಂತೆ ಸುರಂಗ ಮಾರ್ಗದಲ್ಲಿ ನೀರು ಹರಿಯುತ್ತಿತ್ತು. ನೀರು ಎಲ್ಲಿಂದ ಹರಿದು ಬರುತ್ತದೆ. ಎಲ್ಲಿಗೆ ಹರಿದು ಹೋಗುತ್ತದೆ

ಎಂಬುದು ಅವರಿಗೆ ತಿಳಿಯಲಿಲ್ಲ. ಒಳಗಡೆ ಕಗ್ಗತ್ತಲು ನೀರಿನಲ್ಲಿ ಹಾವುಗಳು ಬರುವುವೋ ಏನೋ ಎಂಬ ಭಯ.

"ತಿರುಗಿ ಹೋಗೋಣವೇ?" ಎಂದು ಕೇಳಿದ ಕೇಶವ.

"ಒಮ್ಮೆ ಒಳಗೆ ನುಗ್ಗಿದ್ದೇವೆ ಇದನ್ನೊಮ್ಮೆ ಪೂರ್ಣ ನೋಡಿಯೇ ಬಿಡೋಣ." ಎಂದು ಧೈರ್ಯದಿಂದ ಹೇಳಿದ ಕಾಶೀಮ.

ಇಬ್ಬರೂ ಗುಂಡಿಗೆಯನ್ನು ಗಟ್ಟಿ ಮಾಡಿಕೊಂಡರು. ಸುರಂಗದ ಗೋಡೆ ಹಿಡಿದುಕೊಂಡು ಮುಂದೆ ಸಾಗಿದರು. ಸುರಂಗ ಮಾರ್ಗದಗುಂಟ ಅನತಿ ದೂರದಲ್ಲಿ ಎರಡು ಕಣ್ಣುಗಳು ಹೊಳೆದಂತೆ ಕಂಡಿತು.

"ಸುರಂಗದಲ್ಲಿ ಕಾಡುಮೃಗ ಏನಾದರೂ ಇರಬಹುದೆ?" ಎಂದು ಸಂಶಯ ವ್ಯಕ್ತಪಡಿಸಿದ ಕಾಶೀಮ.

“ಹೌದು, ಹೌದು ಅದು ಹುಲಿ ಅಥವಾ ಸಿಂಹ ಇರಬಹುದು. ಅದರ ಕಣ್ಣುಗಳು ಹೊಳೆದಂತೆ ಕಾಣುವುದು.” ಎಂದ ಕೇಶವ.

‘‘ಏನಾದರೂ ಆಗಲಿ ನಿಧಾನವಾಗಿ ಮುಂದೆ ಸಾಗೋಣ.” ಎಂದು ಇಬ್ಬರೂ ಪಿಸು ಮಾತಿನಲ್ಲಿ ಮಾತಾಡಿಕೊಂಡು ಮುಂದೆ ಸಾಗಿದರು. ಮುಂದೆ ಸಾಗಿದಂತೆ ಹೊಳೆವ ಕಣ್ಣುಗಳು ಕಾಣದಂತಾದವು.

“ಹೊಳೆವ ಕಣ್ಣುಗಳು ಎಲ್ಲಿ ಹೋದವು? ಆ ಕಣ್ಣುಗಳು ಪಿಶಾಚಿಯದು ಇರಭುದೆ? ಪಿಶಾಚಿ ಮಾಯವಾಯಿತ?” ಎಂದನು ಕಾಶೀಮ.

“ಪಿಶಾಚಿ ಎನ್ನುವುದು ಒಂದು ಬ್ರಮೆ. ಪ್ರಪಂಚದಲ್ಲಿ ಎಲ್ಲಿಯೂ ಪಿಶಾಚಿ ಇಲ್ಲವೇ ಇಲ್ಲ.” ಹೇಳಿದ ಕೇಶವ.

ಅಷ್ಟರಲ್ಲಿ ಕಾಶೀಮ

ಆಶ್ಚರ್ಯಚಕಿತನಾದ. "ಕೇಶವ, ಅಲ್ಲಿ ನೋಡು ಸುರಂಗದ ಗೋಡೆಗೆ ಎರಡು ಚಿಕ್ಕ ರಂಧ್ರಗಳಿವೆ. ಆ ರಂಧ್ರಗಳಿಂದ ಹೊರಗಿನ ಬೆಳಕು ತೂರಿ ಬಂದಿದೆ. ಅದುವೇ ನಮಗೆ ದೂರದಿಂದ ಕಣ್ಣುಗಳಂತೆ ಕಂಡಿದೆ." ಎಂದು ಕಾಶೀಮ ಉತ್ಸಾಹಭರಿತನಾಗಿ ಹೇಳಿದ.

ಕೇಶವನೂ ರಂಧ್ರಗಳ ಕಡೆ ನೋಡಿದ. ರಂಧ್ರಗಳ ಮೂಲಕ ಹೊರಗಿನಿಂದ ಬೆಳಕು ತೂರಿ ಬಂದಿರುವುದನ್ನು ಖಚಿತಪಡಿಸಿಕೊಂಡ.

"ಇಲ್ಲಿ ಬೆಳಕು ತೂರಿ ಬರುತ್ತಿದೆ, ಅಂದರೆ ನಾವು ಹೊರಗೆ ಹೋಗುವ ದಾರಿ ಸಮೀಪದಲ್ಲಿಯೇ ಇರಬಹುದು." ಎಂದನು ಕೇಶವ. ಅದೇ ಭರವಸೆಯಲ್ಲಿ ಮುಂದೆ ಸಾಗಿದರು. ಸ್ವಲ್ಪ ದೂರ ಸಾಗುವಷ್ಟರಲ್ಲಿ ಸುರಂಗ ಮಾರ್ಗದ ಕೊನೆ ಕಂಡಿತು. ಓಡಿ ಹೊರ ಬಂದರು.

ಆಶ್ಚರ್ಯಚಕಿತರಾಗಿ ನಿಂತರು. ಅವರ ಎದುರಿಗೆ ಹಳೆಯ ಕೋಟೆ ಕಂಡಿತು. ನೋಡಿ ಸಂತಸಪಟ್ಟರು. ಅಲ್ಲಿಂದ ಹೇಗೋ ಪ್ರಯಾಸಪಟ್ಟು ತಮ್ಮ ಮನೆಗಳನ್ನು ತಲುಪಿದರು.

ಮಾರನೆಯ ದಿನ ತಮ್ಮ ಅನುಭವಗಳನ್ನು ಹಿರಿಯರ ಜೊತೆ ಹಂಚಿಕೊಂಡರು. ಮಿತ್ರರ ಜೊತೆಗೂ ಹಂಚಿಕೊಂಡರು. ಹಿರಿಯರ ಸಲಹೆಯಂತೆ ಅವರಿಬ್ಬರೂ ಪ್ರಾಚ್ಯವಸ್ತು ಇಲಾಖೆಗೆ ಹೋದರು.

ಅಧಿಕಾರಿಗಳಿಗೆ ತಮ್ಮ ಅನುಭವ ಹೇಳಿದರು. ತಾವು ಕಂಡ ಹಳೆಯ ಕೋಟೆಯ ಬಗ್ಗೆ ಹೇಳಿದರು ಆ ಕೋಟೆಯ ಬಗ್ಗೆ ಇಲಾಖೆಯವರಿಗೂ ಗೊತ್ತಿರಲಿಲ್ಲ. ಪ್ರಾಚ್ಯವಸ್ತು ಇಲಾಖೆಯವರು ಕೇಶವ ಮತ್ತು ಕಾಶೀಮರನ್ನು ಕರೆದುಕೊಂಡು ಹಳೆಯ

ಕೋಟೆಯ ಹತ್ತಿರ ಹೋದರು.

ಕೋಟೆ ಮತ್ತು ಬುರ್ಜುಗಳನ್ನು ನೋಡಿ ಬಂದರು. ಆ ಸ್ಥಳವನ್ನು ಇಲಾಖೆಯವರು ಅಭಿವೃದ್ಧಿಪಡಿಸಿದರು. ಪ್ರವಾಸಿ ಸ್ಥಳವನ್ನಾಗಿ ಮಾಡಿದರು. ಈ ಘನಕಾರ್ಯ ಮಾಡಿದ ಕಾಶೀಮ ಮತ್ತು ಕೇಶವನನ್ನು ಸನ್ಮಾನಿಸಿ ಗೌರವಿಸಿದರು.

ಲೇಖಕರು: ಹ.ಮ.ಪೂಜಾರ
ಆಕರ: ಚತುರ ಚಿಣ್ಣರು.
ಪ್ರಕಾಶಕರು: ವಿದ್ಯಾಚೇತನ ಪ್ರಕಾಶನ, ಸಿಂದಗಿ
ಮೊ: 9448986222

"ಮನ ಮಂಥನ"

* ನೀನು ಮತ್ತು ನಿನ್ನ ಗೆಳೆಯರು ಕೂಡಿ ಮಾಡಿದ ಸಾಹಸವನ್ನು ಆಧರಿಸಿ ಒಂದೆರಡು ಚಿತ್ರ ಬಿಡಿಸಿ, ಬಣ್ಣ ಹಚ್ಚು.

ಗೋಡೆಯ ಇನ್ನೊಂದು ಬದಿಯಲ್ಲಿ

– ಅನು: ಪ್ರೇಮಾ ಶಿವಾನಂದ

ಒಬ್ಬ ಹುಡುಗಿಗೆ ಆಕೆಯ ಅಜ್ಜಿಯಿಂದ ಒಂದು ಸುಂದರವಾದ ತೋಟ ಬಳುವಳಿಯಾಗಿ ಬಂದಿತ್ತು. ತೋಟ ಬೆಳೆಸುವುದೆಂದರೆ ಆಕೆಗೆ ಬಹಳ ಆಸಕ್ತಿ. ಜೊತೆಗೆ, ತನ್ನ ತೋಟದ ಬಗ್ಗೆ ಆಕೆಗೆ ಬಹಳ ಹೆಮ್ಮೆ.

ಒಂದು ದಿನ ಒಂದು ಸುಂದರವಾದ ಒಂದು ಗಿಡದ ಬಗ್ಗೆ ಗೊತ್ತಾಯಿತು. ಅದನ್ನು ತನ್ನ ತೋಟದಲ್ಲಿ ಬೆಳೆಸಬೇಕೆಂದು ಬಯಸಿದಳು. ಆ

ಗಿಡವನ್ನು ತರಿಸಿಕೊಂಡು, ತಳಭಾಗದಲ್ಲಿ ಸಣ್ಣ ಸಣ್ಣ ಕಲ್ಲುಗಳನ್ನಿಟ್ಟು ತನ್ನ ಹಿತ್ತಲಿನಲ್ಲಿ ನೆಟ್ಟಳು. ಆಕೆ ಆ ಗಿಡವನ್ನು ಬಹಳ ಕಾಳಜಿಯಿಂದ ಬೆಳೆಸತೊಡಗಿದಳು. ಗಿಡವು ಬೇಗ ಬೇಗನೆ ಬೆಳೆಯಿತು, ಅದರಲ್ಲಿ ಸುಂದರ ಹಸಿರು ಎಲೆಗಳು ಮೂಡಿದವು.

ಕೆಲವು ತಿಂಗಳುಗಳು ಕಳೆದವು. ಆದರೆ ಗಿಡದಲ್ಲಿ ಒಂದೇ ಒಂದು ಹೂವು ಕೂಡ ಅರಳಲಿಲ್ಲ! ಬೇಸರಗೊಂಡ ಆಕೆ ಗಿಡವನ್ನು ಕಿತ್ತು ಎಸೆಯಬೇಕು ಎಂದುಕೊಂಡಳು. ಅಷ್ಟರಲ್ಲಿ, ಆಕೆಯ ನೆರೆಮನೆಯ ಗೆಳತಿ, "ನೀನು ನೆಟ್ಟಿರುವ ಗಿಡದಲ್ಲಿ ಅರಳಿರುವ ಹೂವುಗಳನ್ನು ನೋಡಿ ನಾನು ಎಷ್ಟು ಸಂತೋಷ ಪಟ್ಟಿದ್ದೇನೆ ಅಂತ ನಿನಗೆ ಗೊತ್ತಿಲ್ಲ. ಅಷ್ಟು ಸುಂದರ ಹೋಗಳನ್ನು ಬೆಳೆಸಿದ್ದಕ್ಕಾಗಿ ನಿನಗೆ ಬಹಳ ಧನ್ಯವಾದಗಳು, ಕಣೆ."

ಎಂದು ಹೇಳುತ್ತಿರುವುದು ಕೇಳಿಸಿತು.

ಇದನ್ನು ಕೇಳಿಸಿಕೊಂಡ ಹುಡುಗಿ, ಪಕ್ಕದ ಮನೆಯ ಕಡೆಗೆ ಧಾವಿಸಿ ಬಂದಳು. ಗೋಡೆಯ ಇನ್ನೊಂದು ಬದಿಯಲ್ಲಿ ಅರಳಿರುವ ಸುಂದರವಾದ ಹೂವುಗಳನ್ನು ನೋಡಿದಳು. ಆಕೆ ಪಟ್ಟ ಶ್ರಮ ಸಾರ್ಥಕವಾಗಿತ್ತು. ಗಿಡವು ಆಕೆಯ ಹಿತ್ತಲಿನ ಭಾಗದಲ್ಲಿ ಹೂ ಬಿಟ್ಟಿರಲಿಲ್ಲ. ಏಕೆಂದರೆ ಗೋಡೆಯ ಬಿರುಕುಗಳಲ್ಲಿ ಹಾದು ಅದು ಪಕ್ಕದ ಮನೆಯ ಹಿತ್ತಲಲ್ಲಿ ಧಾರಾಳವಾಗಿ ಹೂ ಬಿಟ್ಟಿತ್ತು!

ಕೃಪೆ: ಅಂತರಜಾಲ
ಅನು: ಪ್ರೇಮಾ ಶಿವಾನಂದ
ಮೊ: 9632441850

“ಮನ ಮಂಥನ”

* ನೀನೂ ಒಂದು ದೊಡ್ಡ ತೆಂಗಿನಚಿಪ್ಪಿನಲ್ಲಿ ಮಣ್ಣಿನೊಂದಿಗೆ, ಮೆಂತ್ಯೆ- ಕೊತ್ತಂಬರಿ ಬೀಜಗಳನ್ನು ಹಾಕಿ, ನೀರುಣಿಸು. ನಂತರ ಅವುಗಳ ಬೆಳವಣಿಗೆಯನ್ನು ಗಮನಿಸು.

The other side of the wall

ಮತ್ತೆ ಓದಿಗಾಗಿ

A young girl inherited[1] a beautiful garden from her grandmother. She loved gardening[2] too and was very

ಹೊಸ ಪದಗಳು

1. Inherited (ಇನ್‌ಹೆರಿಟೆಡ್) – **ಹುಟ್ಟಿನಿಂದ/ಬಳುವಳಿ**

2. Gardening (ಗಾರ್ಡ್‌ನಿಂಗ್) – **ತೋಟಗಾರಿಕೆ**

proud[3] of her garden.

One day, she saw a very beautiful plant in a catalog and wanted that for her garden.

She ordered it and planted it at the base of the stone wall in her backyard.[4] She took great care of the plant, which grew quickly[5] and had beautiful green leaves on it.

Months passed, but not

ಹೊಸ ಪದಗಳು

3. Proud (ಪ್ರೌಡ್) – ಹೆಮ್ಮೆ

4. Backyard (ಬ್ಯಾಕ್‌ಯಾರ್ಡ್)–ಹಿತ್ತಲು

5. Quick (ಕ್ವಿಕ್) – ಬೇಗ

a single flower bloomed[6] on the tree. Vexed,[7] she almost wanted to cut the tree down. At such a time, her invalid called and said, "Thank you so much for the beautiful flowers. You have no idea how much I enjoy looking at the blooms of the vine you have planted".

Hearing this, the young woman rushes to the neighbor's[8] side of the wall and sees the

ಹೊಸ ಪದಗಳು

6. Bloom (ಬ್ಲೂಮ್) – **ಅರಳು**

7. Vexed (ವೆಕ್ಸ್‌ಡ್) – **ಕೆರಳು**

8. Neighbor (ನೈಬರ್) – **ಅಕ್ಕಪಕ್ಕದವರು**

most beautiful flower in bloom. All the care she took had paid off. Only the vine crept through the crevices[9] because of which it did not flower on her side of the wall but did generously[10] on the other side.

ಕೃಪೆ: ಅಂತರಜಾಲ

ಹೊಸ ಪದಗಳು

9. Crevices (ಕ್ರಿವಿಸಿಸ್) – **ಬಿರುಕುಗಳು**

10. Generously (ಜನರಿಯಸ್ಲಿ) – **ಉದಾರವಾಗಿ/ದಾರಾಳವಾಗಿ**

ಸಂಪರ್ಕ ಮಾಹಿತಿ:
ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
 # 76,'ಪುಷ್ಪಾಂಜಲಿ' 3ನೇ ಅಡ್ಡರಸ್ತೆ,
ಶಿವಗಿರಿ, ಧಾರವಾಡ 580 007
ಮೊ: 99866 61055
dhwanitrust@gmail.com
www. dhwanitrust.org

ಗಮನಿಸಿ:
ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ, ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶದಿಂದ ಶಿಕ್ಷಕರು, ಪಾಲಕರು, ಸಂಪನ್ಮೂಲ ವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರುವುದು ಅಪೇಕ್ಷಣೀಯ.